1999-2000	02
2000-2001	14
ನಬಾರ್ಡ್ ಕಾಮಗಾರಿ	1
	34

ಇ) ಕಳಪೆ ಕಾಮಗಾರಿಗಳ ಬಗ್ಗೆ ನಿರ್ದಿಷ್ಟವಾಗಿ ದೂರುಗಳು ಬಂದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಧಾರವಾಡ ನಗರದಲ್ಲಿ ಸ್ಮಶಾನಗಳ ಕೊರತೆ.

2032(2589)

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡ ಮತಕ್ಷೇತ್ರದಲ್ಲಿ ಬರುವ ನಗರ ಮತ್ತು ಗ್ರಾಮಗಳು ಈಗಾಗಲೇ ರುದ್ರ ಭೂಮಿ ಹೊಂದಿವೆಯೇ? ಅವುಗಳ ಪೂರ್ವ ವಿವರ ಕ್ಷೇತ್ರವಾರು ನೀಡುವುದು.

2) ಧಾರವಾಡ ಮತ ಕ್ಷೇತ್ರದಲ್ಲಿ ಬಡಾವಣೆಗಳು ಹೆಚ್ಚಿದಂತೆ ನಗರ ಬೆಳೆದಿರುವುದರಿಂದ ಸಾರ್ವಜನಿಕರಿಗೆ ಸ್ಮಶಾನ ಭೂಮಿಯ ಕೊರತೆ ಇರುವುದನ್ನು ಸರ್ಕಾರ ಗಮನಿಸಿರುವುದೇ? ಹಾಗಿದ್ದರೆ ಯಾವ ಯಾವ ಸ್ಥಳಗಳಲ್ಲಿ ಬೇಕಾಗಿದೆ ಎಂಬುದನ್ನು ಗುರುತಿಸಿ ಕಾಯ್ದಿರಿಸಲಾಗುವುದೆ?

3) ಸ್ಮಶಾನ ಭೂಮಿಯನ್ನು ನಗರವನ್ನಾಗಿ ಸಾರ್ವಜನಿಕರು ಪರಿವರ್ತಿಸಿ ಕೊಳ್ಳುತ್ತಿರುವುದರಿಂದ ಸ್ಮಶಾನ ಭೂಮಿಯನ್ನು ಸರ್ಕಾರ ಮೀಸಲಿಡುವುದು ಅಗತ್ಯವಿಲ್ಲವೇ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

1) ಧಾರವಾಡ ಮತಕ್ಷೇತ್ರದಲ್ಲಿ ಬರುವ ಗ್ರಾಮಗಳಲ್ಲಿ ಹಾಲಿ ಇರುವ ರುದ್ರಭೂಮಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

2) ಹೊಸ ಬಡಾವಣೆಗಳಲ್ಲಿಯ ನಿವಾಸಿಗಳು ಸಧ್ಯಕ್ಕೆ ಬಡಾವಣೆಗಳಿಗೆ ಸಮೀಪವಾಗುವ

ಗ್ರಾಮಗಳ ರುದ್ರಭೂಮಿಗಳಲ್ಲಿ ಶವ ಸಂಸ್ಕಾರ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿರುತ್ತದೆ. ನಗರಗಳ ವ್ಯಾಪ್ತಿಯಲ್ಲಿ ರುದ್ರಭೂಮಿಗಳಿಗೆ ಸ್ಥಳ ಕಲ್ಪಿಸುವ ಜವಾಬ್ದಾರಿ ಆಯಾ ನಗರ ಸಭೆಗಳ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳ ಜವಾಬ್ದಾರಿಯಾಗಿರುತ್ತದೆ.

3) ಈ ಜಿಲ್ಲೆಯಲ್ಲಿ ಧಾರವಾಡ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಅಧಿಕೃತ ಸ್ಮಶಾನ ಭೂಮಿಯನ್ನು ನಗರವನ್ನಾಗಿ ಸಾರ್ವಜನಿಕರು ಪರಿವರ್ತಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಮಾನ್ಯ ಶ್ರೀ ಚಂದ್ರಕಾಂತ ಬೆಲ್ಲದ ಶಾಸಕರು, ಧಾರವಾಡ ಶಹರ ವಿಧಾನಸಭಾ ಮತ ಕ್ಷೇತ್ರದಲ್ಲಿ ಬರುವ ನಗರ ಮತ್ತು ಗ್ರಾಮಗಳ ಹೆಸರು ಮತ್ತು ಸ್ಮಶಾನಕ್ಕಾಗಿ ಉಪಯೋಗಿಸುತ್ತಿರುವ ಜಮೀನುಗಳ ವಿವರ.

ಅ. ಸಂ.	ನಗರ - ಗ್ರಾಮದ ಹೆಸರು	ಬ್ಲಾಕ್ ಸರ್ವೆ ನಂಬರ್	ಕ್ಷೇತ್ರ	ರುದ್ರಭೂಮಿ ವಿವರ
(1)	(2)	(3)	(4)	(5)
1)	ಧಾರವಾಡ	101	8-02	ಮಸಣವಟಾ ಇದೆ.
2)	ಮಾಳಾಪೂರ	77	5-05	1 ಎಕರೆ ಮಾಲ್ಕಿ ಜಮೀನು ಸ್ಮಶಾನವಿದೆ
		78	9-11	- ಸದರ -
		38: 1	2-11	ಮುಸ್ಲಿಂ ಸ್ಮಶಾನವಿದೆ
3)	ಗುಲಗಂಜಿಕೊಪ್ಪ	77	2-02	1 ಎಕರೆ ಸರಕಾರಿ ಸ್ಮಶಾನ
4)	ಸೈದಾಪೂರ	-	-	ಗುಲಿಗಂಜಿಕೊಪ್ಪ ಮತ್ತು ಮಾಳಾಪೂರ ಸ್ಮಶಾನಗಳಲ್ಲಿ ಶವಸಂಸ್ಕಾರ ಮಾಡುತ್ತಿದ್ದಾರೆ.
5)	ದೊಡ್ಡನಾಯ್ಕನಕೊಪ್ಪ	-	-	-''-
6)	ಮದಿಹಾಳ	-	-	-''-
7)	ಸಪ್ತಾಪೂರ ಕರ್ನಾಟಕ ವಿಶ್ವವಿದ್ಯಾಲಯದ	134: 1	1500 ಚ.ಮಿ.	ಸ್ಮಶಾನವಿದೆ 1 ಎಕರೆ ಜಮೀನು ಸ್ಮಶಾನವಿದೆ.
8)	ಕೆಲಗೇರಿ	516	4-35	ಸ್ಮಶಾನವಿದೆ
9)	ಲಕಮನಹಳ್ಳಿ	68	7-13	ಕಲಾಲ ಮಸಣವಟಾ
		69	9-11	ಅಂಜುಮನ ಮಸಣವಟಾ

	70	4-38	- ಸದರ -
	67	0-02	ಮುನಸಿಪಾಲ್ಟಿ
	71	0-09	- ಸದರ -
	72	3-34	- ಸದರ -
10) ಹೊಸಯಲ್ಲಾಪೂರ	-	-	ಲಕಮನಹಳ್ಳಿ ಗ್ರಾಮದ ಸ್ಮಶಾನದಲ್ಲಿ ಶವಸಂಸ್ಕಾರ ಮಾಡುತ್ತಿದ್ದಾರೆ.
11) ಅತ್ತಿಕೊಳ್ಳ	-	-	-''-
12) ನವಲೂರ	580	2-00	ಸರಕಾರಿ ಜಮೀನದಲ್ಲಿದೆ.
13) ಸತ್ತೂರ	23	2-00	ಮಾಲ್ಕಿ ಜಮೀನದಲ್ಲಿದೆ.
14) ರಾಯಾಪೂರ	30	2-0	ಸರಕಾರಿ ಜಮೀನದಲ್ಲಿದೆ.
15) ಈಟಗಟ್ಟಿ	1	25-00	2 ಎಕರೆ ಮಾಲ್ಕಿ ಜಮೀನದಲ್ಲಿದೆ.
16) ನುಗ್ಗಿಕೇರಿ	74	2-00	ಮಾಲ್ಕಿ ಜಮೀನದಲ್ಲಿದೆ.
17) ಜೋಗೆಲ್ಲಾಪೂರ	82	2-00	ಸರಕಾರಿ ಮಸಣವಟಾ
18) ಅಮರಗೋಳ	28	12-01	ಸರಕಾರಿ ಸ್ಮಶಾನವಿದೆ.
19 ಸುತಗಟ್ಟಿ	6	10-07	ಖಾಸಗಿ ಜಮೀನದಲ್ಲಿದೆ.
	96:2	2-01	- ಸದರ -
20) ಗಾಮನಗಟ್ಟಿ	347:ಬ	3-00	ಸರಕಾರಿ ಜಮೀನದಲ್ಲಿದೆ.